ಸಿ.ಸಿ ನಂಃ 8861/2015

ಚಾಸಾಃ 9 , ಪ್ರಾಸಾಃ 6

**ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ**

**ಸಿ.ಸಿ ನಂಃ 8861/2015**

**ಚಾಸಾಃ 9 , ಪ್ರಾಸಾಃ 6**

**ಸಾಕ್ಷಿದಾರರ ಹೆಸರುಃ** ಸಿ ನಾಗರಾಜು

**ತಂದೆಯ ಹೆಸರುಃ** ಲೇಟ್ ಚಿಕ್ಕಹನುಮಯ್ಯ

**ವಯಸ್ಸುಃ** 61 ವರ್ಷ

**ಉದ್ಯೋಗಃ** ನಿವೃತ್ತ ಎಸ್.ಐ

**ವಾಸಃ** ನಾಗರಬಾವಿ, ಮಾಳಗಾಳ , ಬೆಂಗಳೂರು

**ದಿನಾಂಕಃ 22-10-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. ದಿನಾಂಕಃ06-06-2012 ರಿಂದ ಜುಲೈ 2017 ರವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕಃ04-07-2014 ರಂದು ಫಿರ್ಯಾದುದಾರರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ. ಮುಂದುವರೆದ ತನಿಖೆಗಾಗಿ ಚಾಸಾ-10 ರವರಿಗೆ ಕಡತ ವರ್ಗಾಯಿಸಿರುತ್ತೇನೆ.
3. ಸಾಕ್ಷಿಯು ನಿಪಿ-1 ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದ್ದರಿಂದ **ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.**

ಸಿ.ಸಿ ನಂಃ 8861/2015

ಚಾಸಾಃ 9 , ಫ್ರಾಸಾಃ 6

**4.** ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದಾರೆ. ಆದ್ದರಿಂದ **ಪ್ರಥಮ ವರ್ತಮಾನ ವರದಿಯನ್ನು ನಿಪಿ-3 ಎಂದು ಗುರುತಿಸಲಾಯಿತು.**

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ-**

5. ನಿಪಿ-3 ಪ್ರಥಮ ವರ್ತಮಾನ ವರದಿಯಲ್ಲಿ ಕೃತ್ಯ ನಡೆದ ಸಮಯ ನಮೂದಿಸಿಲ್ಲ ಎಂದರೆ ಸರಿ. ದೂರುದಾರರು ರಾತ್ರಿ 10.00 ಗಂಟೆಗೆ ಠಾಣೆಗೆ ಬಂದಿರುತ್ತಾರೆ. ಫಿರ್ಯಾದಿಯವರು ಕೊಟ್ಟ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸುವಾಗ ನಾನು ದೂರುದಾರಗಿಂದ ಸರಿಯಾದ ಮಾಹಿತಿ ಪಡೆದಿಲ್ಲ ಎಂದರೆ ಸರಿಯಲ್ಲ.

**6.** ದೂರುದಾರರು ದೂರು ಕೊಟ್ಟಾಗ ನಾನು ಠಾಣೆಯಲ್ಲಿ ಇರಲಿಲ್ಲ ನಂತರ ಬಂದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕೇಸಿನ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

**(ರಂಗೇಗೌಡ ಸಿ)**

**ಮು. ಮ. ದಂ. ನ್ಯಾ. ಬೆಂ. ನಗರ.**